
ಬಾಗಿಲಿನ ಪಕ್ಕನೇ ಒಂದು ಉದ್ದದ ಸಣ್ಣ ಕಿಟಕಿಯಿದೆ, ನಿಮಾಯ್ ಅದರೊಳಗೆ ಮುಖ ಹಾಕಿ ಹೇಳಿದ, "ಬಾಬು ಈಗ ತಾನೇ ಆಫೀಸಿಂದ ಬಂದಿದಾರೆ". ಅಂದರೆ ಅವರಿಗೀಗ ತೊಂದರೆ ಕೊಡಬಾರದು. ಕಿಟಕಿನೂ ಚೆನ್ನಾಗಿ ಮುಚ್ಚಿದ. ಆದರೆ, ಅವನು ಅಲ್ಲಾಡಲಿಲ್ಲ. ಮುಚ್ಚಿರೋ ಬಾಗಿಲು, ಕಿಟಕಿ ನೋಡ್ತಾ ನಿಂತೇ ಇದ್ದ. ಮನೆ ಗೋಡೆ ಮತ್ತು ಬಾಗಿಲು ಮೇಲೆ ಕಣ್ಣಾಡಿಸುತ್ತಾ ಏನೋ ಹುಡುಕುತ್ತಿರುವಂತಿತ್ತು.

ಸುಲತಾ ಹೇಳಿದಳು, "ಯಾರೋ ಒಬ್ಬ ಸುಮಾರು ದಿನದಿಂದ ಇಲ್ಲೇ ಸುತ್ತಾಡ್ತಾ ಇದ್ದಾನೆ, ನೋಡಿದ್ಯಾ ದಾದಾ?"

"ನೋಡಿದಿನಿ" ಹೇಳಿದ ಅಸಿತ್, "ಒಳ್ಳೆಯವನಲ್ಲ ಅನಿಸುತ್ತೆ, ಏನೂ ಸಂಚು ಮಾಡದೆ ಯಾರೂ ಹೀಗೆ ಸುತ್ತಾಡೋದಿಲ್ಲ. ಅದಕ್ಕೇ ಹೋಗುವಾಗ ಎಚ್ಚರಿಕೆಯಿಂದಿರಿ ಅಂತ ಹೇಳಿದ್ದೆ. ಬಾಗಿಲು ಮಾತ್ರ ಯಾವ ಕಾರಣಕ್ಕೂ ತೆಗೆದಿಡಬೇಡಿ. ನಿಮಾಯ್‌ಗೂ ಹೇಳು, ಬಾಗಿಲು ತೆರೆದಿಟ್ಟು ಅದೂಇದೂ ತರೋಕೆ ಆಚೆಗೆ ಹೋಗಬೇಡ ಅಂತ. ಅತ್ತೆಗೂ..."



"ನನಗೆ ತುಂಬಾ ಹೆದರಿಕೆಯಾಗ್ತಿದೆ ದಾದಾ." ಸುಲತಾ ಹೇಳಿದಳು. "ನಾನು ಮಧ್ಯಾಹ್ನ ಮಹಡಿಯಿಂದ ಪೋಸ್ಟ್‌ಮ್ಯಾನ್ ಬರೋದು ನೋಡಿ ಕೆಳಗೆ ಬಂದು ಕಿಟಕಿ ತೆಗೆದೆ. ಆಗ ಅವನು ದಿಢೀರಂತ ಕಿಟಕಿ ಹತ್ತಿರ ಬಂದು ಪೋಸ್ಟ್‌ಮ್ಯಾನ್‌ಗೆ ಕೇಳ್ತಾ ಇದ್ದ, ಈ ಮನೆ ವಿಳಾಸ ಏನ್ ಸಾಮಿ ಅಂತ. ನನಗೆಷ್ಟು ಭಯವಾಯ್ತು ಅಂದರೆ, ಮೈ ಮೇಲಿನ ರೋಮವೆಲ್ಲ ನೆಟ್ಟಗೆ ನಿಂತವು. ಇದ್ದಕ್ಕಿದ್ದಂತೆ ಅವನು ಯಾಕೆ ಹಾಗೆ ಕೇಳಿದ? ಬೇಗಬೇಗ ಕಿಟಕಿ ಮುಚ್ಚಿಬಿಟ್ಟೆ. ಪೋಸ್ಟ್‌ಮ್ಯಾನ್ ಏನ್ ಹೇಳಿದ ಕೇಳಿಸಿಕೊಳ್ಳಲಿಲ್ಲ."

"ಅಯ್ಯೋ, ಇದೊಳ್ಳೆ ಕತೆ!" ಎನ್ನುತ್ತಾ ವ್ಯಾಕುಲಚಿತ್ತನಾಗಿ ಟೀ ಕಪ್ ಕೈಗೆತ್ತಿಕೊಂಡ ಅಸಿತ್.

ಇಡೀ ರಾತ್ರಿ ಮತ್ತೆ ಬಾಗಿಲು ತೆಗೆಯಲೇ ಇಲ್ಲ; ಅಸಿತ್‌ನ ಸಿಗರೇಟು ಮುಗಿದುಹೋಗಿದ್ದವು, ಆದರೂ ಹೊರಗೆ ಯಾರೂ ಹೋಗಲೇ ಇಲ್ಲ.

ಮಾರನೆ ದಿನ ಬಾಗಿಲು ತೆರೆಯದೆ ಇರೋಕೆ ಸಾಧ್ಯವೇ ಇಲ್ಲ. ತೆಗೆಯಲೇಬೇಕು, ಬೆಳಗ್ಗೆ ಕೆಲಸದವಳು ಬರ್ತಾಳೆ; ಅದೂ ಅಲ್ಲದೆ ಮನೆ ಕೆಲಸವಂತೂ ಇದ್ದೇ ಇರುತ್ತೆ... ಹಾಲು ತರಬೇಕು, ಅಂಗಡಿಗೆ ಹೋಗಬೇಕು, ಬಟ್ಟೆ ಇಸ್ತ್ರಿ ಮಾಡಿಸಿ ತರಬೇಕು, ಬ್ರೆಡ್ ಅಂಗಡಿಯವನಿಗೆ ದುಡ್ಡು ಕೊಡಬೇಕು... ಸುಲತಾ, ಅವಳು ಹೊರಗೆ ಹೋಗಬೇಕಾಗಿಲ್ಲ, ಸದ್ಯ! ಕಾಲೇಜಿಗೆ ರಜೆ.

ಬೆಳಗ್ಗೆ ಅಸಿತ್ ನಿಮಾಯ್‌ಗೆ ಹೇಳಿದ, "ಬಾಗಿಲು ತೆರೆದು ಆ ಕಡೆ ಈ ಕಡೆ ನೋಡ್ಕೊಂಡು ಹುಷಾರಾಗಿ ಆಚೆಗೆ ಕಾಲಿಡು".

"ಬೆಳಗ್ಗೆ ನಾನವನನ್ನ ನೋಡಲಿಲ್ಲ ಬಾಬು, ಆದರೆ ನಿನ್ನೆ ಬಜಾರ್ ಮೂಲೇಲಿರೋ ಚಾ ಅಂಗಡಿಲೀ ನೋಡಿದಂಗನ್ನಿಸುತ್ತೆ."

"ಹಂಗಾದ್ರೆ ಆ ಆಸಾಮಿ ಜಾಗ ಬಿಟ್ಟು ಕದಲ್ತಾ ಇಲ್ಲ" ತುಂಬಾ ನಿಧಾನಕ್ಕೆ ಬಹಳ ಭಾರವಾದ ಧ್ವನಿಯಲ್ಲಿ ಹೇಳಿಕೊಂಡ ಅಸಿತ್.

ಈ ಸಮಯದಲ್ಲೇ ಬಾಬಾ ಕಾನ್ಪುರ್‌ದಲ್ಲಿನ ಅಕ್ಕನ ಮನೆಗೆ ಹೋಗಿ ಸೇರಿಕೊಂಡಿದ್ದಾರೆ. ಈ ಬೇಸಿಗೆ ರಜೆಯಲ್ಲಿ ಕಾನ್ಪುರ್‌ಗೇ ಹೋಗಲೇಬೇಕಿತ್ತೆ? ಬಾಬಾ ಯುನಿವರ್ಸಿಟಿಯಲ್ಲಿ ಪ್ರೊಫೆಸರ್, ಬಾಬಾನ ಅಳಿಯನೂ ಪ್ರೊಫೆಸರ್. ಬೇಸಿಗೆ ರಜೆ ಬಂದಾಗ ಇಬ್ಬರೂ ಜಾಗ ಬದಲಾಯಿಸ್ತಾರೆ. ಕೆಲವು ಸಲ ಬಾಬಾ ಅಲ್ಲಿಗೆ ಹೋಗುತ್ತಾರೆ, ಕೆಲವು ಸಲ ಭಾವ ಇಲ್ಲಿಗೆ ಬರುತ್ತಾರೆ. ಸುಲತಾ ಒಂದ್ಸಲ ಹೋಗಿದ್ದಳು. ಮತ್ತೆ ಅವಳಿಗೆ ಹೋಗೋಕೆ ಇಷ್ಟ ಇಲ್ಲ. ಆದ್ದರಿಂದ ಬಾಬಾ ಬರುವವರೆಗೆ ಅಸಿತ್‌ನೇ ಮನೆ ಜವಾಬ್ದಾರಿ ತೆಗೆದುಕೊಳ್ಳಬೇಕು. ಈಗಲೂ ಅದೇ ಆಗಿದೆ.